# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22 ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-139 ರನ್ವಯ ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಕೇಂದ್ರಗಳಲ್ಲಿ ಮೂವತ್ತೈದು ಮೆಟ್ರಿಕ್ ನಂತರದ ಹಾಸ್ಟೆಲ್ ಗಳನ್ನು ಪ್ರಾರಂಭಿಸಲು ಅಗತ್ಯವಿರುವ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಸಕಇ 146 ಪಕವಿ 2021, ದಿನಾಂಕ:23-09-2021.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ:ಸಕನಿ/ಇಡಿ-6/ಹೊ.ವಿನಿ/ಸಿಆರ್-1/ 2021-22, ದಿನಾಂಕ: 27-04-2021 ಮತ್ತು 13-10-2021.

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2021-22ನೇ ಸಾಲಿನ ಆಯವ್ಯಯ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಕೇಂದ್ರಗಳಲ್ಲಿ ಮೂವತ್ತೈದು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಅತಿ ಹೆಚ್ಚು ಬೇಡಿಕೆ ಇರುವ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಮಂಜೂರು ಮಾಡಬೇಕಾದ ವಿದ್ಯಾರ್ಥಿನಿಲಯಗಳ ವಿವರ, ಸದರಿ ವಿದ್ಯಾರ್ಥಿನಿಲಯಗಳಿಗೆ ಒದಗಿಸಬೇಕಾದ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳ ಮತ್ತು ವಿದ್ಯಾರ್ಥಿನಿಲಯಗಳಿಗೆ ಮಂಜೂರು ಮಾಡಬೇಕಾದ ಹುದ್ದೆಗಳ ವಿವರಗಳ ಪ್ರಸ್ತಾವನೆಯನ್ನು ಸಲ್ಲಿಸಿ, ಹೊಸದಾಗಿ ಮಂಜೂರು ಮಾಡಲಾದ ವಿದ್ಯಾರ್ಥಿನಿಲಯಗಳನ್ನು ಮೊದಲಿಗೆ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಿ, ನಂತರ ನಿವೇಶನ ಪಡೆದು, ಕಟ್ಟಡ ನಿರ್ಮಿಸಬೇಕಾಗಿರುವುದರಿಂದ ಪ್ರಸ್ತುತ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಹುದ್ದೆಗಳು ಮಂಜೂರಾದಲ್ಲಿ ಮಾತ್ರ ಗ್ರೂಪ್-ಡಿ ಸಿಬ್ಬಂದಿಗಳನ್ನು ಹೊರಸಂಪನ್ಮೂಲದಿಂದ ಪಡೆದುಕೊಂಡು ಮೇಲ್ವಿಚಾರಕರ ಹುದ್ದೆಗೆ ಕೇಂದ್ರ

---2

ಸ್ಥಾನದಲ್ಲಿರುವ ಇತರೇ ನಿಲಯ ಮೇಲ್ವಿಚಾರಕರಿಗೆ ಹೆಚ್ಚುವರಿ ಪ್ರಭಾರ ವಹಿಸಬಹುದಾಗಿರುವ ಕಾರಣ ಇಪ್ಪತ್ತೆರಡು ಜಿಲ್ಲಾ ಕೇಂದ್ರಗಳಲ್ಲಿ ತಲಾ ನೂರು ಸಂಖ್ಯಾಬಲದ ಮೂವತ್ತೈದು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪೈಕಿ ಹದಿನೈದು ಬಾಲಕರ ಮತ್ತು ಇಪ್ಪತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಈ ಮೇಲಿನ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಕಇ 146 ಪಕವಿ 2021, ಬೆಂಗಳೂರು ದಿನಾಂಕ: 17-05-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನ ಆಯವ್ಯಯ ಕಂಡಿಕೆ-139 ರನ್ವಯ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುಬಂಧದಲ್ಲಿರುವಂತೆ ಜಿಲ್ಲಾ ಕೇಂದ್ರಗಳಲ್ಲಿ ಹದಿನೈದು ಬಾಲಕರ ಮತ್ತು ಇಪ್ಪತ್ತು ಬಾಲಕಿಯರ ಒಟ್ಟು ಮೂವತ್ತೈದು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ ವಿದ್ಯಾರ್ಥಿನಿಲಯಗಳಿಗೆ ಈ ಕೆಳಕಂಡಂತೆ ಹುದ್ದೆಗಳನ್ನು ಸೃಜಿಸಿ, ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ. ಸಂ | ಹುದ್ದೆಯ ವಿವರ | ಒಂದು ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ಒಂದು ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ಒಟ್ಟು 35 ವಿದ್ಯಾರ್ಥಿನಿಲಯಗಳಿಗೆ (15 ಬಾಲಕರ, 20 ಬಾಲಕಿಯರ ವಿದ್ಯಾರ್ಥಿನಿಲಯಗಳು) ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|---|---|
| **1** | ವಾರ್ಡನ್ | 1 | 1 | 35 | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| **2** | ಅಡುಗೆಯವರು | 3 | 3 | 105 | ಹೊರಗುತ್ತಿಗೆ ಆಧಾರದ ಮೇಲೆ |
| **3** | ಅಡುಗೆ ಸಹಾಯಕರು | 2 | 2 | 70 | |
| **4** | ರಾತ್ರಿ ಕಾವಲುಗಾರರು | 0 | 1 | 20 | |
| | | **6** | **7** | **230** | |

Pragna

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 388 ಎಫ್ ಆರ್ ಸಿ 2021, ದಿನಾಂಕ:13-04-2022 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ: ಪ್ರಜ್ಞಾ ಅಮ್ಮೆಂಬಳ)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ
3. ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸಸೌಧ.

*****

**<u>ಸರ್ಕಾರದ ಆದೇಶ ಸಂಖ್ಯೆ:ಸಕಇ 146 ಪಕವಿ 2021 ಕ್ಕೆ ಅನುಬಂಧ.</u>**

2021-22ನೇ ಸಾಲಿನ ಆಯವ್ಯಯ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಜಿಲ್ಲಾ ಕೇಂದ್ರಗಳಿಗೆ ಮಂಜೂರಾತಿ ನೀಡಿದ ಮೂವತ್ತೈದು ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ವಿವರ.

| ಕ್ರ. ಸಂ | ಜಿಲ್ಲೆಯ ಹೆಸರು | ವಿದ್ಯಾರ್ಥಿನಿಲಯಗಳ ಸಂಖ್ಯೆ | | | ಮಂಜೂರಾತಿ ಸಂಖ್ಯೆ | | |
|---|---|---|---|---|---|---|---|
| | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು |
| 1 | ಬೆಂಗಳೂರು ನಗರ | 1 | 1 | 2 | 100 | 100 | 200 |
| 2 | ಬೆಂಗಳೂರು ಗ್ರಾಮಾಂತರ | 0 | 1 | 1 | 0 | 100 | 100 |
| 3 | ಚಿತ್ರದುರ್ಗ | 1 | 1 | 2 | 100 | 100 | 200 |
| 4 | ದಾವಣಗೆರೆ | 1 | 1 | 2 | 100 | 100 | 200 |
| 5 | ತುಮಕೂರು | 1 | 1 | 2 | 100 | 100 | 200 |
| 6 | ಶಿವಮೊಗ್ಗ | 1 | 1 | 2 | 100 | 100 | 200 |
| 7 | ಮೈಸೂರು | 0 | 1 | 1 | 0 | 100 | 100 |
| 8 | ಮಂಡ್ಯ | 0 | 1 | 1 | 0 | 100 | 100 |
| 9 | ಹಾಸನ | 1 | 1 | 2 | 100 | 100 | 200 |
| 10 | ಚಿಕ್ಕಮಗಳೂರು | 0 | 1 | 1 | 0 | 100 | 100 |
| 11 | ಉಡುಪಿ | 0 | 1 | 1 | 0 | 100 | 100 |
| 12 | ಬೆಳಗಾವಿ | 0 | 1 | 1 | 0 | 100 | 100 |
| 13 | ವಿಜಯಪುರ | 1 | 1 | 2 | 100 | 100 | 200 |
| 14 | ಬಾಗಲಕೋಟೆ | 1 | 1 | 2 | 100 | 100 | 200 |
| 15 | ಧಾರವಾಡ | 1 | 1 | 2 | 100 | 100 | 200 |
| 16 | ಹಾವೇರಿ | 1 | 0 | 1 | 100 | 0 | 100 |
| 17 | ಗದಗ | 0 | 1 | 1 | 0 | 100 | 100 |
| 18 | ಕಲಬುರಗಿ | 1 | 1 | 2 | 100 | 100 | 200 |
| 19 | ರಾಯಚೂರು | 1 | 1 | 2 | 100 | 100 | 200 |
| 20 | ಕೊಪ್ಪಳ | 1 | 1 | 2 | 100 | 100 | 200 |
| 21 | ಬಳ್ಳಾರಿ | 1 | 1 | 2 | 100 | 100 | 200 |
| 22 | ಯಾದಗಿರಿ | 1 | 0 | 1 | 100 | 100 | 100 |
| | **ಒಟ್ಟು** | **15** | **20** | **35** | **1500** | **2000** | **3500** |

(ಡಾ: ಪ್ರಜ್ಞಾ ಅಮ್ಮೆಂಬಳ)
ಸರ್ಕಾರದ ಉಪ ಕಾರ್ಯದರ್ಶಿ- 1
ಸಮಾಜ ಕಲ್ಯಾಣ ಇಲಾಖೆ